ವಿದ್ಯುತ್ ಉತ್ಪಾದನೆ ಕುರಿತು

152 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಮೇರಿಕದ ಕೊಜೆಂಟ್ರಿಕ್ಸ್ ಸಂಸ್ಥೆಗೆ ಶಾಖೋತ್ಪನ್ನ ಉತ್ಪಾದನೆಗೆ ಮಂಗಳೂರಿನಲ್ಲಿ ಭೂಮಿಯನ್ನು ಕೊಟ್ಟಿದೆಯೇ?*

ಆ) *ಇದು ಕಾರ್ಯಾರಂಭವನ್ನು ಯವಾಗ ಮಾಡಲಿದೆ ಇದರ ಅಂದಾಜು ಯೋಜನಾ ವೆಚ್ಚವೆಷ್ಟು?*

ಇ) *ವಿದ್ಯುತ್ ಚಿತಾಗಾರಗಳಿಗೆ ಈಗ ವಿದ್ಯುತ್ ದರವನ್ನು ವಿಧಿಸುತ್ತಿರುವುದರಲ್ಲಿ ಕಡಿಮೆ ಮಾಡುವ ಬಗ್ಗೆ ಸರ್ಕಾರವೇನಾದರೂ ಯೋಚಿಸಿರುವರೆ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಕೋಜೆಂಟ್ರಿಕ್ಸ್ ಸಂಸ್ಥೆಯು ಜನವರಿ 2000ನೇ ಇಸವಿಯಲ್ಲಿ ಯೋಜನೆ ಅಂತಿಮ ಹಂತವನ್ನು ತಲುಪುವ ನಿರೀಕ್ಷೆ ಇದೆ. ಈ ಯೋಜನೆಯ ಒಟ್ಟು ವೆಚ್ಚವು ರೂ. 4298.78 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

ಇ) ಇಲ್ಲ

ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವುದು

161ಎ - ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿದ್ಯುತ್ ಪೂರೈಕೆಗಾಗಿ ಖಾಸಗಿ ಉದ್ದಿಮೆಗಳು ಬಳಸುವ ಸಣ್ಣ ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವ ವಿಷಯ ಸರ್ಕಾರದವರ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಎಷ್ಟು ಹೆಚ್.ಪಿ. ವರೆಗಿನ ಜನರೇಟರ್‌ಗಳಿಗೆ ಇದು ಅನ್ವಯವಾಗುವುದು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಈಗಾಗಲೇ ಅಗತ್ಯವಾದ ಸರ್ಕಾರಿ ಆದೇಶ ಹೊರಡಿಸಿದೆ.

ಆ) ಉದ್ದಿಮೆದಾರರು ಅಳವಡಿಸಿಕೊಂಡಿರುವ ಎಲ್ಲಾ ಹೆಚ್.ಪಿ.ಗೂ ಇದು ಅನ್ವಯವಾಗುವುದು.

ಕೆ.ಇ.ಬಿ.ಗೆ ಬರಬೇಕಾದ ಬಾಕಿ ಹಣ

161 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಹಣವೆಷ್ಟು, ಯಾವ ಯಾವ ಕಂಪನಿಗಳಿಂದ ಎಷ್ಟೆಷ್ಟು ಹಣ ಬರಬೇಕಾಗಿದೆ, ಬಾಕಿ ವಸೂಲಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ದಿನಾಂಕ : 30-11-95ರ ಅಂತ್ಯಕ್ಕೆ ವಿವಿಧ ಗ್ರಾಹಕರುಗಳಿಂದ ಮಂಡಳಿಗೆ ಬರಬೇಕಾಗಿದ್ದ ಬಾಕಿ ಹಣದ ಒಟ್ಟು ಮೊತ್ತ ರೂ. 71,364.68 ಲಕ್ಷಗಳು, ದಿನಾಂಕ 30-11-95ರ ಅಂತ್ಯದಲ್ಲಿರುವಂತೆ ರೂ. ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಬಾಕಿ ಉಳಿಸಿಕೊಡುವ ಖಾಸಗಿ ಗ್ರಾಹಕರುಗಳ ಹೆಸರು ಮತ್ತು ಬಾಕಿ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.